# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1621
2) ಸದಸ್ಯರ ಹೆಸರು : ಶ್ರೀ ಪಿ. ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 18–03–2021
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಮಾರಾಟದಿಂದ ರಾಜ್ಯ ಬೊಕ್ಕಸಕ್ಕೆ ಬಂದಿರುವ ಒಟ್ಟು ಸುಂಕದ ಮೊತ್ತವೆಷ್ಟು; (ವಿವರ ನೀಡುವುದು) | (ರೂ.ಕೋಟಿಗಳಲ್ಲಿ) (see table below) |
| ಆ) | ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಮೂಲ ಬೆಲೆ ಮತ್ತು ಸರಬರಾಜು ವೆಚ್ಚಗಳಿಗೆ ಕೇಂದ್ರದಿಂದ ಅಬಕಾರಿ ಸುಂಕ+ವಿತರಕರ ಕಮೀಷನ್ ವಿಧಿಸಿದ ನಂತರ ಬರುವ ಮೊತ್ತಕ್ಕೆ ರಾಜ್ಯ ಸರ್ಕಾರದಿಂದ ಎಷ್ಟು ಮೊತ್ತದ ಮೌಲ್ಯಧಾರಿತ ತೆರಿಗೆ (VAT) ವಿಧಿಲಾಗುತ್ತಿದೆ; ಎಲ್ಲಾ ವಿವರಗಳನ್ನು ನೀಡುವುದು. | ಕರ್ನಾಟಕ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗೆ ಸಂಬಂಧಿಸಿದಂತೆ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 1957 ಅಡಿಯಲ್ಲಿ ತೆರಿಗೆ ವಿಧಿಸುತ್ತಿದ್ದು ದಿನಾಂಕ: 08.03.2021 ರಲ್ಲಿರುವಂತೆ ದರಗಳ ವಿವರಗಳು ಈ ಕೆಳಕಂಡತಿರುತ್ತದೆ:– (see table below) |

ಅ) ಉತ್ತರ (ರೂ.ಕೋಟಿಗಳಲ್ಲಿ)

| ವರ್ಷ | ಪೆಟ್ರೋಲ್ | ಡೀಸೆಲ್ | ಒಟ್ಟು |
|---|---|---|---|
| 2016–17 | 4527.30 | 7836.43 | 12363.73 |
| 2017–18 | 4546.25 | 7786.42 | 12332.67 |
| 2018–19 | 5564.52 | 8730.14 | 14294.66 |
| 2019–20 | 6037.83 | 9304.25 | 15342.08 |
| 2020–21 (ಫೆಬ್ರವರಿ–21ರ ಅಂತ್ಯಕ್ಕೆ) | 5590.02 | 8364.70 | 13954.72 |

ಆ) ಉತ್ತರ

| ವಿವರ | ಪೆಟ್ರೋಲ್ ರೂ. | ಡೀಸೆಲ್ ರೂ. |
|---|---|---|
| ಮೂಲ ದರ (Basic Value) | 33.93 | 35.64 |
| ಕೇಂದ್ರದ ಅಬಕಾರಿ ಸುಂಕ (AED) | 32.90 | 31.80 |
| FDZ, ಸರಬರಾಜು ವೆಚ್ಚ, ಇತರೆ | 0.42 | 0.41 |
| ಒಟ್ಟು | 68.25 | 67.85 |
| ರಾಜ್ಯ ಸರ್ಕಾರದ ತೆರಿಗೆ (KST) | 23.54 | 16.28 |
| ವಿತರಕರ ಕಮೀಷನ್ | 3.42 | 2.22 |
| ಒಟ್ಟು ಚಿಲ್ಲರೆ ಮಾರಾಟದರ | 94.21 | 86.35 |

....2

| | | |
|---|---|---|
| ಇ) | ರಾಜ್ಯದಿಂದ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳಿಗೆ ವಿಧಿಸುವ ಮೌಲ್ಯಧಾರಿತ ತೆರಿಗೆಗೆ, ರಾಜ್ಯದಲ್ಲಿ ಸದರಿ ತೈಲಗಳಿಗೆ ಯಾವ ರೀತಿಯಲ್ಲಿ ಮೌಲ್ಯವರ್ಧನ ಪ್ರಕ್ರಿಯೆ ಜಾರಿಯಲ್ಲಿದೆ; (ವಿವರ ನಿಡುವುದು) | ಕರ್ನಾಟಕ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗೆ ಸಂಬಂಧಿಸಿದಂತೆ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 1957 ಅಡಿಯಲ್ಲಿ ತೆರಿಗೆ ವಿಧಿಸುತ್ತಿದ್ದು, ದಿನಾಂಕ: 08.03.2021 ರಲ್ಲಿರುವಂತೆ ತೆರಿಗೆ ದರಗಳ ವಿವರಗಳು ಈ ಕೆಳಕಂಡತಿರುತ್ತದೆ:–<br>ಪೆಟ್ರೋಲ್ : ಶೇ.35<br>ಡೀಸೆಲ್ : ಶೇ.24 |
| ಈ) | ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಮೂಲ ಬೆಲೆ ಮತ್ತು ಸರಬರಾಜು ವೆಚ್ಚಗಳಿಗೆ ಕೇಂದ್ರದಿಂದ ಅಬಕಾರಿ ಸುಂಕ+ವಿತರಕರ ಕಮೀಷನ್ ವಿಧಿಸಿದ ನಂತರ ಬರುವ ಮೊತ್ತಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ತೆರಿಗೆ ಅಥವಾ ಸುಂಕ ವಿಧಿಸುವ ಬದಲು ಮೂಲ ತೈಲದ ಬೆಲೆಗೆ ವಿಧಿಸುವ ಪ್ರಸ್ತಾಪ ಸರ್ಕಾರದ ಬಳಿ ಇದೆಯೇ; (ವಿವರ ನೀಡುವುದು) | ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಉ) | ಇತ್ತೀಚೆಗೆ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಬೆಲೆ ಹೆಚ್ಚಳವಾಗಿರುವ ಪರಿಣಾಮದಿಂದ (Spiral effect) ಜನಸಾಮಾನ್ಯರಿಗೆ ತೊಂದರೆ ಉಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಸರ್ಕಾರದ ಕ್ರಮವೇನು? (ವಿವರ ನೀಡುವುದು) | ಹೌದು<br><br>ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆಯು ಮಾರುಕಟ್ಟೆ ಆಧಾರಿತವಾಗಿದ್ದು, ಅವುಗಳ ಮಾರಾಟದ ಬೆಲೆಯಲ್ಲಿ ದಿನೇದಿನೇ ಬದಲಾವಣೆಗಳಾಗುತ್ತಿದೆ. ಮೂಲ ಬೆಲೆಯಲ್ಲಿ ಹೆಚ್ಚಳವಾದಾಗ ಅವುಗಳ ಮಾರಾಟದ ತೆರಿಗೆ ಹೆಚ್ಚಳವಾಗುತ್ತದೆ. ದಕ್ಷಿಣದ ರಾಜ್ಯಗಳಿಗೆ ಹೋಲಿಸಿದಾಗ ಕೇರಳ ರಾಜ್ಯ ಹೊರತುಪಡಿಸಿದರೆ ಪೆಟ್ರೋಲ್ ಬೆಲೆಯು ಕರ್ನಾಟಕದಲ್ಲಿಯೇ ಕಡಿಮೆ ಇರುತ್ತದೆ. ಡೀಸೆಲ್ ಬೆಲೆಯು ದಕ್ಷಿಣದ ಇತರ ರಾಜ್ಯಗಳಿಗಿಂತ ಕರ್ನಾಟಕದಲ್ಲಿಯೇ ಅತೀ ಕಡಿಮೆ ಇರುತ್ತದೆ. |

ಸಂಖ್ಯೆ: ಆಇ 37 ಸಿಎಸ್‌ಎಲ್ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ